ಹತ್ತನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ 155 ಪ್ರಶ್ನೆಗಳ ಪೈಕಿ 89 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು : ಮಂಡಿಸಲಾಗಿದೆ. ಅನುಬಂಧ–1. ಈಗ ಸದನವನ್ನು ಸೋಮವಾರ ಬೆಳಿಗ್ಗೆ 11.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವನ್ನು ಮಧ್ಯಾಹ್ನ 12 ಗಂಟೆ 02 ನಿಮಿಷಕ್ಕೆ ಮುಂದೂಡಿ ಮತ್ತೆ ದಿನಾಂಕ 7ನೇ ಜುಲೈ 2014ರ ಸೋಮವಾರದಂದು ಬೆಳಿಗ್ಗೆ 11.00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಲಾಯಿತು)

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಸದನದಲ್ಲಿ ಮಂಡಿಸಲಾದ ಉತ್ತರಗಳು

ಟಿ. ಸಿ. ಸುಟ್ಟು ಹೋಗಿರುವುದು

869 (1685) ಶ್ರೀ ಐಹೊಳೆ ಡಿ. ಮಹಾಲಿಂಗಪ್ಪ (ರಾಯಭಾಗ)

(ಅ) ಬೆಳಗಾವಿ ಜಿಲ್ಲೆ ರಾಯಭಾಗ ತಾಲ್ಲೂಕು ಭೀಕರ ಬರಗಾಲ ಪೀಡಿತ ಪ್ರದೇಶವಾಗಿದ್ದು, ರೈತರ ಜಮೀನುಗಳಲ್ಲಿ ಅಳವಡಿಸಿರುವ 100 ಕೆ. ವಿ. ಹಾಗೂ 63 ಕೆ. ವಿ. ಟಿ.ಸಿ.ಗಳು ಸುಟ್ಟು ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದಲ್ಲಿ, ಸುಟ್ಟಿರುವ ಟಿ.ಸಿ.ಗಳನ್ನು ಸರಿಪಡಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿರುತ್ತದೆ ಹಾಗೂ ಎಷ್ಟು ದಿನಗಳಲ್ಲಿ ಸರಿಪಡಿಸುವುದು ಹೊಸ ಟಿ. ಸಿ. ಗಳನ್ನು ಅಳವಡಸಿಕೊಡಲಾಗುವುದೇ;

(ಇ) ರಾಯಭಾಗ ತಾಲ್ಲೂಕಿನಲ್ಲಿ ಎಷ್ಟು ರೈತರ ಜಮೀನುಗಳಿಗೆ 100 ಕೆ. ವಿ. ಹಾಗೂ 63 ಕೆ. ವಿ. ಅಳವಡಿಸಲಾಗಿದೆ (ವಿವರ ನೀಡುವುದು)?

ಶ್ರೀ ಡಿ. ಕೆ. ಶಿವಕುಮಾರ್ (ಇಂಧನ ಸಚಿವರು)

(ಅ) ಹೌದು.

(ಆ) ಬೆಳಗಾವಿ ಜಿಲ್ಲೆ ರಾಯಭಾಗ ತಾಲ್ಲೂಕಿನಲ್ಲಿ 2014–15ನೇ ಸಾಲಿನಲ್ಲಿ ಮೇ ಅಂತ್ಯದವರೆಗೆ ಒಟ್ಟು 271 ಸಂಖ್ಯೆಯ ಪರಿವರ್ತಕಗಳು

ವಿಫಲಗೊಂಡಿದ್ದು, ಈ ಪೈಕಿ 236 ಸಂಖ್ಯೆಯ ಪರಿವರ್ತಕಗಳನ್ನು ಬದಲಾಯಿಸಲಾಗಿದೆ.

ನಗರ ಪ್ರದೇಶಗಳಲ್ಲಿ ಮತ್ತು ಕುಡಿಯುವ ನೀರಿನ ಸ್ಥಾವರಗಳ ವಿಫಲವಾದ ಪರಿವರ್ತಕಗಳನ್ನು 24 ಗಂಟೆಯಲ್ಲಿ, ಗ್ರಾಮೀಣ ಪ್ರದೇಶದಲ್ಲಿ ವಿಫಲವಾದ ಪರಿವರ್ತಕಗಳನ್ನು 48 ಗಂಟೆಯಲ್ಲಿ ಹಾಗೂ ರೈತರ ಕೃಷಿ ಪಂಪ್‌ಸೆಟ್‌ಗಳ ವಿಫಲವಾದ ಪರಿವರ್ತಕಗಳನ್ನು 72 ಗಂಟೆಯಲ್ಲಿ ಬದಲಾಯಿಸಲಾಗುತ್ತಿದೆ. ವಿಫಲವಾದ ಪರಿವರ್ತಕಗಳನ್ನು ಬದಲಾಯಿಸಲು ವಿಭಾಗ ಮಟ್ಟದಲ್ಲಿ ಪರಿವರ್ತಕ ಬ್ಯಾಂಕ್ ಅನ್ನು ತೆರೆಯಲಾಗಿರುತ್ತದೆ ಹಾಗೂ ತ್ವರಿತವಾಗಿ ವಿಫಲಗೊಂಡ ಪರಿವರ್ತಕಗಳನ್ನು ದುರಸ್ತಿ ಮಾಡಲು ತಾಲ್ಲೂಕುವಾರು ದುರಸ್ತಿ ಕೇಂದ್ರಗಳನ್ನು ತೆರೆಯಲು ಕ್ರಮ ಕೈಗೊಳ್ಳಲಾಗುತ್ತಿದೆ.

(ಇ) ರಾಯಭಾಗ ತಾಲ್ಲೂಕಿನಲ್ಲಿ ರೈತರ ಜಮೀನುಗಳಿಗೆ ಅಳವಡಿಸಿರುವ ಪರಿವರ್ತಕಗಳ ವಿವರಗಳು ಕೆಳಕಂಡಂತಿವೆ.

110 ಕೆ. ವಿ. ಎ.	1,468 ಸಂಖ್ಯೆಗಳು
63 ಕೆ. ವಿ.	3,183 ಸಂಖ್ಯೆಗಳು

ಹೊಸ ಕೆ. ಇ. ಬಿ. ಸಬ್ ಸ್ಟೇಷನ್‌ಗಳ ಸ್ಥಾಪನೆ

870 (1338); ಶ್ರೀ ಆನಂದ ಸಿಂಗ್ (ವಿಜಯನಗರ–ಬಳ್ಳಾರಿ)

(ಅ) ಹೊಸಪೇಟೆ ತಾಲ್ಲೂಕಿನ ವಿಜಯನಗರ ಮತಕ್ಷೇತ್ರ ವ್ಯಾಪ್ತಿಯ ಬೈಲು ವದ್ದಿಗೆರೆ ಗ್ರಾಮ ಹಾಗೂ ಹೊಸಪೇಟೆ ನಗರದ ಉತ್ತರದಲ್ಲಿ 110 ಕೆ. ವಿ. ಸಬ್ ಸ್ಟೇಷನ್ ಸ್ಥಾಪನೆ ಮಾಡಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಈ ನಿಟ್ಟಿನಲ್ಲಿ ಸರ್ಕಾರ ಯಾವ ಯಾವ ಕ್ರಮ ಕೈಗೊಂಡಿದೆ; ಯಾವಾಗ ಪ್ರಾರಂಭಿಸಲಾಗುವುದು ಮತ್ತು ಈ ಬಗ್ಗೆ ಸ್ಥಳ ಗುರುತಿಸಿ